ಮುಲ್ಕಿ ಮೀನುಗಾರಿಕೆ ಬಂದರು ಬಗ್ಗೆ

573 - ಶ್ರೀ ಸೋಮಪ್ಪ ಸುವರ್ಣ, (ಮೂಡಬಿದರೆ) : ಮಾನ್ಯ ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮುಲ್ಕಿ ಮೀನುಗಾರಿಕೆ ಬಂದರು : ಮುಲ್ಕಿಯ ಯೋಜಿತ ಮೀನುಗಾರಿಕೆ ಬಂದರಿನ ಮಂಜೂರಾತಿಯು ಯಾವ ಹಂತದಲ್ಲಿದೆ;

ಆ) ಈ ಯೋಜನೆಯ ಅಂದಾಜುವೆಚ್ಚವೆಷ್ಟು ;

ಇ) ಈ ಯೋಜನೆ ಕಾರ್ಯಗೊಳಿಸಲು ಕೇಂದ್ರ ಸರ್ಕಾರದ ಸಹಾಯ ದೊರೆಯುವುದೇ;

ಈ) ಹಾಗಿದ್ದಲ್ಲಿ ಇದರ ಕೆಲಸ ಯಾವಾಗ ಪ್ರಾರಂಭವಾಗುವುದು?

ಶ್ರೀ ವಸಂತ ವಿ. ಸಾಲಿಯಾನ್ (ಮೀನುಗಾರಿಕೆ ಮತ್ತು ಬಂದರುಗಳ ರಾಜ್ಯ ಸಚಿವರು) :

(ಅ) ಮುಲ್ಕಿಯಲ್ಲಿ ಈ ಪ್ರಸ್ತಾಪ ಉದ್ಭವಿಸುವುದಿಲ್ಲ. ಆದರೆ ಪಕ್ಕದ ಉಡುಪಿ ತಾಲ್ಲೂಕು ಹೆಜಮಾಡಿ ಕೋಡಿಯಲ್ಲಿ ಈ ಪ್ರಸ್ತಾವನೆ ಇದೆ. ಪ್ರಸ್ತಾವನೆಯು ಭರತ ಸರ್ಕಾರದ ಪರಿಶೀಲನೆಯಲ್ಲಿದ್ದು, ಈ ತಂಗುದಾಣದ ನಿರ್ಮಾಣಕ್ಕೆ ಬೇಕಾಗಿರುವ ಪ್ರದೇಶವನ್ನು ಸ್ವಾಧೀನಪಡಿಸಿಕೊಳ್ಳಲಾಗುತ್ತಿದೆ; ಭೂ ಸ್ವಾಧೀನದ ಕ್ರಮ ಅಂತಿಮ ಹಂತದಲ್ಲದೆ.

(ಆ) ಸುಮಾರು 100.00 ಲಕ್ಷ ರೂಪಾಯಿಗಳು.

(ಇ) ಹೌದು, ಶೇಕಡ 50 ರಷ್ಟು ವೆಚ್ಚವನ್ನು ಕೇಂದ್ರ ಸರ್ಕಾರ ಭರಿಸುವುದು;

(ಈ) ಭಾರತ ಸರ್ಕಾರದ ಮಂಜೂರಾತಿ ದೊರೆತ ಕೂಡಲೇ ಕೆಲಸ ಪ್ರಾರಂಭಿಸಲಾಗುವುದು.

ಬೀದರ್ ಜಿಲ್ಲೆಯಲ್ಲಿ ಮೀನುಗಾರಿಕೆ ಅಭಿವೃದ್ಧಿ

384 - ಶ್ರೀ ನಾರಾಯಣರಾವ್ ಮನಹಳ್ಳಿ (ಬೀದರ್) : ಮಾನ್ಯ ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೀದರ್ ಜಿಲ್ಲೆಯಲ್ಲಿ ಮೀನುಗಾರಿಕೆ ಅಭಿವೃದ್ಧಿಗಾಗಿ ಯಾವ ಯಾವ ಕ್ರಮಗಳನ್ನು ರೂಪಿಸಲಾಗಿದೆ;

ಆ) ಜಿಲ್ಲೆಯಲ್ಲಿ ಯಾವ ಯಾವ ಸ್ಥಳಗಳನ್ನು ಇದಕ್ಕಾಗಿ ಆಯ್ದುಕೊಳ್ಳಲಾಗಿದೆ;

ಇ) ಕಳೆದ 4 ವರ್ಷಗಳಲ್ಲಿ ಇದಕ್ಕಾಗಿ ಎಷ್ಟು ಹಣವನ್ನು ವಿನಿಯೋಗ ಮಾಡಲಾಯಿತು;

ಈ) ಇದರಿಂದ ಯಾವ ಯಾವ ಕೆಲಸಗಳನ್ನು ಮಾಡಲಾಗಿದೆ?

ಶ್ರೀ ವಸಂತ ವಿ. ಸಾಲಿಯಾನ (ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು) :

ಮೀನು ಮರಿಗಳನ್ನು ದಾಸ್ತಾನು ಮಾಡುವುದು, ಮೀನುಗ್ಕಾರಿಕೆ ಮತ್ತು ಮೀನುಗಾರರ ಸಹಕಾರ ಸಂಘಗಳಿಗೆ ನೆರವು, ಮೀನು ಸಾಕಾಣೆ ಕೊಳಗಳ ನಿರ್ಮಾಣ, ಮೀನುಗಾರರಿಗೆ ತರಬೇತಿ, ಪರಿಶಿಷ್ಟ ವರ್ಗದವರಿಗೆ ನೆರವು, ಮತ್ಸ್ಯಾಲಯ ಸ್ಥಾಪನೆ.

ಆ) ಜಿಲ್ಲೆಯ ಎಲ್ಲಾ ತಾಲ್ಲೂಕುಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ.

ಇ) ರೂ. 22.50 ಲಕ್ಷ.

ಈ) ಮುಖ್ಯವಾಗಿ ಕೆರೆಗಳಲ್ಲಿ ಮೀನು ಕೃಷಿಗಾಗಿ 35.70 ಲಕ್ಷ ಮೀನು ಮರಿಗಳ ಬಿತ್ತನೆ, 5 ಮೀನು ಕೃಷಿ ಕೊಳಗಳ ನಿರ್ಮಾಣಕ್ಕಾಗಿ ರೈತರಿಗೆ ರೂ. 50,000-00

ಗಳ ಸಹಾಯಧನ, 40 ಮೀನುಗಾರರಿಗೆ ನೆರವು, ಎರಡು ಮೀನುಗಾರರ ಸಹಕಾರ ಸಂಘಗಳಿಗೆ ರೂ. 0.34 ಲಕ್ಷ ಶೇರು ಬಂಡವಾಳ, ಮೀನುಗಾರರಿಗೆ ತರಬೇತಿ, ಮೀನು ಕೃಷಿಕರ ಅಭಿವೃದ್ಧಿ ಸಂಸ್ಥೆಯಿಂದ ಸಣ್ಣ ಕೆರೆಗಳ ಅಭಿವೃದ್ಧಿ ಮತ್ತು ಮೀನುಗಾರಿಕೆ ವಿಸ್ತರಣೆ, ವಿಶೇಷ ಘಟಕ ಯೋಜನೆಯಡಿಯಲ್ಲಿ 75 ಪರಿಶಿಷ್ಟ ಜಾತಿಯವರಿಗೆ ಸಹಾಯ.

ಸೋಮವಾರಪೇಟೆ ತಾಲ್ಲೂಕು ಶುಂಟಿಕೊಪ್ಪಕ್ಕೆ ಹೆರಿಗೆ ವಾರ್ಡ್ ಮಂಜೂರಾತಿ

35 - ಶ್ರೀ ಎ.ಎಂ. ಬೆಳ್ಳಿಯಪ್ಪ (ಸೋಮವಾರಪೇಟೆ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸೋಮವಾರಪೇಟೆ ತಾಲ್ಲೂಕ್ ಶುಂಟಿಕೊಪ್ಪಕ್ಕೆ ಸರ್ಕಾರದಿಂದ ಹೆರಿಗೆ ವಾರ್ಡ್ ಮಂಜೂರಾಗಿದೆಯೇ?

ಆ) ಮಂಜೂರಾಗಿದ್ದರೆ ಕೆಲಸವನ್ನು ಯಾವಾಗ ಪ್ರಾರಂಭಿಸಲಾಗುವುದು.

ಡಾ॥ ಎ.ಬಿ. ಮಲಕರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಶಾಲಾ ಕೊಠಡಿಗಳ ನಿರ್ಮಾಣಕ್ಕೆ ಹಣ ಬಿಡುಗಡೆ

375 - ಶ್ರೀ ನಾರಾಯಣರಾವ್ ಮನಹಳ್ಳಿ (ಬೀದರ್) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1994-95ನೇ ಸಾಲಿನಲ್ಲಿ ಎಷ್ಟು ಶಾಲಾ ಕೊಠಡಿಗಳ ನಿರ್ಮಾಣವನ್ನು ಕೈಗೆತ್ತಿಕೊಳ್ಳಲಾಗಿದೆ? ಜಿಲ್ಲಾವಾರು ಅಂಕಿಅಂಶಗಳನ್ನು ಒದಗಿಸುವುದು?

ಆ) ಆದಕ್ಕಾಗಿ ಆಯವ್ಯಯದಲ್ಲಿ ಎಷ್ಟು ಹಣವನ್ನು ನಿಗದಿಪಡಿಸಲಾಗಿತ್ತು?

ಇ) ಇದುವರೆವಿಗೂ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ?

ಈ) ಆಗಸ್ಟ್ 15, 1994ರ ವೇಳೆಗೆ ಈ ಯೋಜನೆಯನ್ವಯ ಎಷ್ಟು ಕೊಠಡಿಗಳ ನಿರ್ಮಾಣ ಕಾರ್ಯಪೂರ್ಣಗೊಂಡಿದೆ?

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ (ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು) :

ಅ) 1994-95ನೇ ಸಾಲಿನಲ್ಲಿ ಒಟ್ಟು 20,010 ಶಾಲಾ ಕೊಠಡಿಗಳ ನಿರ್ಮಾಣ ಕಾರ್ಯವನ್ನು ಕೈಗೆತ್ತಿಕೊಳ್ಳಲಾಗಿದೆ. ಇದರಲ್ಲಿ 8010 1993-94ರ ಬ್ಯಾಕ್‌ಲಾಗ್ ಹಾಗೂ 12.000 1994-95ಕ್ಕೆ ಹೊಸದಾಗಿ ನಿಗದಿ ಮಾಡಲಾಗಿದೆ.

(ಜಿಲ್ಲಾವಾರು ಅಂಕಿಅಂಶಗಳ ಪಟ್ಟಿ ಲಗತ್ತಿಸಿದೆ)

ಆ) 1994-95ರ ಆಯವ್ಯಯದಲ್ಲಿ ಈ ಕಾರ್ಯ ಕ್ರಮಕ್ಕಾಗಿ ರೂ. 3000.00 ಲಕ್ಷಗಳನ್ನು ನಿಗದಿಪಡಿಸಲಾಗಿದೆ.

ಇ) 1993-94ರ ಬ್ಯಾಕ್‌ಲಾಗ್‌ನ್ನು ಪೂರ್ಣಗೊಳಿಸಲು ಇದುವರೆವಿಗೂ ರೂ. 1900-00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ. ಪ್ರಗತಿಯನ್ನಾಧರಿಸಿ 94-95ರ ಆಯವ್ಯಯವನ್ನು ಹಂತಹಂತವಾಗಿ ಬಿಡುಗಡೆ ಮಾಡಲಾಗುತ್ತಿದೆ.

ಈ) 1993-94ರ ಕೊಠಡಿಗಳ ನಿರ್ಮಾಣ ಬಾಬ್ತು ಆಗಸ್ಟ್ 15ರ ವೇಳೆಗೆ 1539ಕೊಠಡಿಗಳ ನಿರ್ಮಾಣ ಪೂರ್ಣಗೊಂಡಿದೆ.. ಉಳಿದವು ವಿವಿಧ ನಿರ್ಮಾಣಹಂತದಲ್ಲಿದೆ. 1994-95ರ ಗುರಿಯನ್ನು ಇನ್ನೂ ಕೈಗೆತ್ತಿಕೊಂಡಿಲ್ಲ.